**ದಿನಾಂಕಃ 20.08.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀಸವಾಲು : ಪ್ರತಿವಾದಿಗಳ ಪರ ವಕೀಲರಿಂದಃ**

3. ನಾನು ಇದೇ ಜಮೀನಿನ ಅಭಿವೃದ್ಧಿಗಾಗಿ ಸಾಲ ಕೊಟ್ಟಿದ್ದೆ ಎಂದರೆ ಇಲ್ಲ, ಖರೀದಿ ಮಾಡಲು ಹಣ ಕೊಟ್ಟಿದ್ದೆ. 5 ನೇ ಪ್ರತಿವಾದಿ ಕಡೆಯಿಂದ ನಿಡಿ 1 ಕ್ರಯದ ಕರಾರು ಮಾಡಿಕೊಟ್ಟ ದಿನಾಂಕದಂದು ಭದ್ರತೆಗಾಗಿ 2 ಖಾಲಿ ಚೆಕ್ಕುಗಳನ್ನೂ ಕೂಡಾ ಪಡೆದಿದ್ದೇನೆ ಎಂದರೆ ಖಾಲಿ ಚೆಕ್ ಗಳನ್ನು ಪಡೆದಿರುವ ವ್ಯವಹಾರ ಮತ್ತು ಈ ವ್ಯವಹಾರ ಬೇರೆ ಬೇರೆ ವ್ಯವಹಾರಗಳು. 5 ನೇ ಪ್ರತಿವಾದಿಯ ವಿರುದ್ಧ ನಾನು ಹೊಸಪೇಟೆಯ ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ಚೆಕ್ ಬೌನ್ಸ್ ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನ್ಯಾಯಾಲಯವು 5 ನೇ ಪ್ರತಿವಾದಿಯನ್ನು ಬಿಡುಗಡೆ ಮಾಡಿದೆ ಎಂದರೆ ನಾನು ಹೈಕೋರ್ಟಿನಲ್ಲಿ ಅಪೀಲು ಸಲ್ಲಿಸಿದ್ದೇನೆ. ಸದರಿ ಚೆಕ್ ಗಳನ್ನು ಈ ಕ್ರಯದ ಕರಾರಿನ ವ್ಯವಹಾರದಲ್ಲಿ ಭದ್ರತೆಗಾಗಿ ಕೊಟ್ಟಿದ್ದ ಕಾರಣಕ್ಕಾಗಿ ಕ್ರಿಮಿನಲ್ ನ್ಯಾಯಾಲಯ 5 ನೇ ಪ್ರತಿವಾದಿಯನ್ನು ಬಿಡುಗಡೆ ಮಾಡಿದೆ ಎಂದರೆ ಸರಿಯಲ್ಲ. ನಿಪಿ 1 ಕ್ರಯದ ಕರಾರನ್ನೂ ಕೂಡಾ ಭದ್ರತೆಗಾಗಿ ಕೊಟ್ಟಿದ್ದನ್ನು ದುರುಪಯೋಗ ಮಾಡಿಕೊಂಡು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ 1 ರಲ್ಲಿ ಉಲ್ಲೇಖಿಸಿರುವ ಪ್ರಕಾರ ಸದರಿ ದಿನಾಂಕದಂದು ಯಾವುದೇ ಕ್ರಯದ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ ನಾನು ನೋಟೀಸ್ ಕೊಟ್ಟಿದ್ದೇನೆ ಆದರೆ ಯಾವ ದಿನಾಂಕದಂದು ಎಂಬ ಬಗ್ಗೆ ನಮ್ಮ ವಕೀಲರಿಗೆ ಗೊತ್ತು. ಪ್ರತಿವಾದಿಗಳಿಗೆ ಸಬ್ ರಿಜಿಸ್ಟ್ರಾರ್ ಕಚೇರಿಗೆ ನೋಂದಣೆ ಮಾಡಿಸಿ ಕೊಡಲು ಬರುವಂತೆ ಯಾವ ದಿನಾಂಕದಂದು ತಿಳಿಸಿದ್ದೆ? ಎಂದರೆ ನನಗೆ ನೆನಪಿಲ್ಲ. ಆ ದಿನ ಯಾವ ವಾರ ಆಗಿತ್ತು? ಎಂದರೆ ನನಗೆ ಗೊತ್ತಿಲ್ಲ. ನಾನು ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಎಷ್ಟು ಗಂಟೆ ಕಾಲ ಇದ್ದೆ? ಎಂದರೆ ನಾನು ಸಬ್ ರಿಜಿಸ್ಟ್ರಾರ್ ಕಚೇರಿಗೆ ಹೋಗಿರಲಿಲ್ಲ. ಕ್ರಯದ ಬಾಕಿ ಮೊತ್ತವನ್ನು ಸಂದಾಯ ಮಾಡಲು ನನ್ನ ಬಳಿ ಹಣವಿತ್ತು ಎಂದು ತೋರಿಸಲು ಯಾವುದೇ ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿ. ನಾನು ಜಮೀನನ್ನು ಖರೀದಿ ಮಾಡುವ ಉದ್ದೇಶ ಹೊಂದಿಲ್ಲದೇ ಇದ್ದಿದ್ದರಿಂದ ಬಾಕಿ ಮೊತ್ತ ಸಂದಾಯ ಮಾಡುವ ಹಣ ಇರುವ ಬಗ್ಗೆ ಮತ್ತು ನೋಂದಣೆ ಮಾಡಿಸಿಕೊಳ್ಳಲು ನೋಟೀಸ್ ನೀಡಿ ಸಬ್ ರಿಜಿಸ್ಟ್ರಾರ್ ಕಚೇರಿಗೆ ಹೋಗುವ ಬಗ್ಗೆ ಯಾವುದೇ ಪ್ರಯತ್ನ ಮಾಡಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ, ದಾವೆಯಲ್ಲಿ ಕೋರಿದಂತೆ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. ಮ್ಯುಟೇಶನ್ ಸರಿ ಮಾಡಿಸಿ ಕ್ರಯಪತ್ರ ನೋಂದಣೆ ಮಾಡಿಸಿ ಕೊಡುವಂತೆ ಪ್ರತಿವಾದಿಗಳಿಗೆ ನೋಟೀಸ್ ನೀಡಿದ್ದೀರಾ? ಎಂದರೆ ಬಾಯಿ ಮಾತಿನಲ್ಲಿ ಕೇಳಿದ್ದೆ. ನನ್ನ ಮತ್ತು ಪ್ರತಿವಾದಿಗಳ ನಡುವೆ ಯಾವುದೇ ಕ್ರಯದ ಕರಾರು ನಡೆರಲಿಲ್ಲವಾದ್ದರಿಂದ ನಾನು ಕರಾರನ್ನು ಜಾರಿಗೊಳಿಸುವ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ. ಭದ್ರತೆಗಾಗಿ ಕೊಟ್ಟ ದಾಖಲೆಗಳನ್ನು ದುರುಪಯೋಗ ಮಾಡಿಕೊಂಡು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ. ಹಗರಿಬೊಮ್ಮನಹಳ್ಳಿ